## ಗಮನ ಸೆಳೆಯಂಬ ಸೂಚನೆ

### ಎಸ್.ಸಿ./ಎಸ್.ಟಿ. ಎಂದು ಸುಳ್ಳು ಜಾತಿ ಪತ್ರವನ್ನು ನೀಡಿರುವ ಬಗ್ಗೆ

ಶ್ರೀ ಬಿ. ಬಸವಲಿಂಗಪ್ಪ.—ಸರಕಾರಿ ಸೇವೆಗೆ ಸೇರುವ ಸಮಯದಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳಿಗೆ ಸೇರದ ಅಭ್ಯರ್ಥಿಗಳು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ನೀಡಿರುವುದರಿಂದ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳಿಗೆ ಸೇರಿದ ಅಭ್ಯರ್ಥಿಗಳ ನ್ಯಾಯ ಸಮ್ಮತವಾದ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವುದರಿಂದ ಉಂಟಾಗಿರುವ ತೀವ್ರ ಪರಿಣಾಮಗಳ ಬಗ್ಗೆ ಸಮಾಜ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯುಬಯಸುತ್ತೇನೆ.

ಶ್ರೀ ವಿ. ಎಲ್. ಪಾಟೀಲ್ (ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು).—ಈ ಬಗ್ಗೆ ನಾನು ಈ ಕೆಳಕಂಡಂತೆ ಹೇಳಿಕೆಯನ್ನು ಮಾಡಬಯಸುತ್ತೇನೆ.

It is true that Government have received representations from the public regarding securing of false caste certificates by the candidates not belonging to S.Cs/S.Ts and have availed benefits meants for S.Cs/S.Ts. It is understood that some of the public undertakings have already initiated action in several cases. More representations are about Naik, Valmiki, Nayak, Talwar, Pariwar, Ber2d, Maleru, Jenu Kuruba, Kadu Kuruba and Beda etc., communities having taken advantage of the oncessions under Schedule Tribe.

In the instances where false certificates are obtained by individuals, Civil Right Enforcement Cell has initiated action and Criminal cases have also been launched. Complaints have been received that in several instances the real beneficiaries are being harrassed by resorting to legal action.

With a view to adopting a clear cut policy to ensure that people not belonging to S.Cs./S.Ts. do not get advantages of the concessions oxtended by Government, it is proposed to constitute a Committee to enquire into these aspects particularly, instances of false certificates being obtained by individuals not belonging to S.C. and S.T. and the action to be taken in those cases and to place the report before the Cabinet.

In the meantime strict instructions are being issed by Government that stern action will be taken against the Officers who are responsible for giving false Caste Certificates without proper enquiry and without satisfying themselves that the candidates actually belong to S.C. and S.T.

† ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಜುಲೈ ೫ನೇ ದಿನಾಂಕದ "ಪ್ರಜಾವಾಣಿ" ಪತ್ರಿಕೆಯಲ್ಲಿ ಪ್ರಕಟವಾಗಿರತಕ್ಕ ಒಂದು ವಿಷಯವನ್ನು ನಾನು ಓದುತ್ತೇನೆ.

## ಸುಳ್ಳು ಜಾತಿ ಪತ್ರ

## ೨೦೭ ಜನರ ವಿರುದ್ಧ ಮೊಕದ್ದಮೆ

ಬೆಂಗಳೂರು, ಜುಲೈ ೪—ಸುಳ್ಳು ಜಾತಿ ಪತ್ರ ನೀಡಿ ವಿವಿಧ ಹುದ್ದೆಗಳನ್ನು ಗಿಟ್ಟಿಸಿಕೊಂಡ ೨೦೭ ಜನರ ವಿರುದ್ಧ ರಾಜ್ಯ ನಾಗರಿಕ ಹಕ್ಕುಗಳ ಸಂರಕ್ಷಣಾ ದಳ ಕ್ರಿಮಿನಲ್ ಮೊಕದ್ದಮೆ ಹೂಡಿದೆ.

ಮೇಲ್ಮೊಟಕ್ಕೆ ಸಾಬೀತಾದ ಈ ಪ್ರಕರಣಗಳ ಸಂಬಂಧದಲ್ಲಿ ಮುಂದಿನ ತನಿಖೆಯೂ ಸಾಗಿದೆ ಎಂದು ಸಂರಕ್ಷಣಾ ದಳದ ಡಿ.ಐ ಜಿ. ಯವರಾದ ಕೆ. ಶ್ರೀನಿವಾಸ ಆಳ್ವ ಇಂದು ಇಲ್ಲಿ ''ಪ್ರಜಾವಾಣಿ''ಗೆ ತಿಳಿಸಿದರು.

ರಾಜ್ಯದ ವಿವಿಧ ಭಾಗಗಳಿಂದ ಸುಮಾರು ೭೩೭ ಸುಳ್ಳು ಜಾತಿ ಪತ್ರ ಪ್ರಕರಣ ಕುರಿತು ದೂರು ಬಂದಿತ್ತು. ಆ ಎಲ್ಲವನ್ನೂ ಪರಿಶೀಲನೆಗೆ ಒಳಪಡಿಸಿದಾಗ ೨೦೭ ಪ್ರಕರಣಗಳು ಮೇಲ್ನೋಟಕ್ಕೆ ಸಾಬೀತಾದವು. ಇವುಗಳ ತನಿಖೆ ಬಳಿಕ ವರದಿಯನ್ನು ಪೋಲೀಸ್ ಮಹಾ ನಿರ್ದೇಶಕರಿಗೆ ಕಳಿಸಲಾಯಿತು. ಅವರ ಆಜ್ಞೆ ಮೇರೆಗೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ ಎಂದು ಅವರು ವಿವರಿಸಿದರು.

ಈ ೭೩೭ ಪ್ರಕರಣಗಳಲ್ಲಿ ಸುಳ್ಳು ಜಾತಿ ಪತ್ರ ಕೊಟ್ಟು ಅವಕಾಶ ಗಿಟ್ಟಿಸಿಕೊಂಡವರ ವಿವರ ಹೀಗಿದೆ. ಎಂ.ಬಿ.ಬಿ.ಎಸ್. ಹಾಗೂ ಬಿ.ಇ. ಸೀಟು ಪಡೆದವರು ೮೦, ಬಿ.ಇ.ಎಲ್., ಎಚ್.ಎಂ.ಟಿ. ಇತ್ಯಾದಿ ಕೈಗಾರಿಕೆಗಳಲ್ಲಿ ಉದ್ಯೋಗ ಗಿಟ್ಟಿಸಿದವರು ೧೦೮, ಬ್ಯಾಂಕ್ ಸೇರಿದವರು ೧೦೮. ಆಂಚೆ ಮತ್ತು ತಂತಿ ಇಲಾಖೆಗೆ ಸೇರಿದವರು ೭೯, ಸರ್ಕಾರಿ ಇಲಾಖೆ ೨೬೭, ವಿವಿಧ ಮಂಡಳಿ ಹಾಗೂ ನಿಗಮ ೬೮, ಇತರ ಕಡೆಗಳಲ್ಲಿ ೧೭ ಹೀಗೆ ಒಟ್ಟು ೭೩೭ ಜನ.

ಸ್ವಾಮಿ, ಒಂದು ವಿಚಾರ ತಮ್ಮ ಮುಂದೆ ಹೇಳುತ್ತೇನೆ. ಈ ರೀತಿ ಸುಳ್ಳು ಜಾತಿ ಪತ್ರಗಳನ್ನು ಕೊಟ್ಟಿರುವವರು ಇದಕ್ಕೆ ಜವಾಬ್ದಾರಿ ಆಗಲೇಬೇಕು. ಆದರೆ ಅವರ ವಿಚಾರದಲ್ಲಿ ಇಲ್ಲಿ ಏನೂ ಹೇಳಿಲ್ಲ. ಇದನ್ನು ತಹಸೀಲ್ದಾರ್ ಕೊಟ್ಟಿರಬಹುದು, ಡಿ.ಸಿ. ಯವರು ಕೊಟ್ಟಿರಬಹುದು ಅಥವಾ ಎ.ಸಿ. ಯವರೇ ಕೊಟ್ಟಿರಬಹುದು. ಈ ಸುಳ್ಳು ಜಾತಿ ಪತ್ರವನ್ನು ಕೊಟ್ಟವರಿಗೆ ಇವತ್ತು ಯಾವುದೇ ಆತಂಕ ಇಲ್ಲ. ಪಾಪ, ಕೆಲವು ಪಟ್ರಭದ್ರ ಹಿತಗಳು ಈ ಸುಳ್ಳು ಜಾತಿ ಪತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಬೇರೆ ಒಂದು ಇಲಾಖೆಯನ್ನೇ ಮಾಡಿಕೊಂಡಿದ್ದಾರೆ. ಈ ಬಗ್ಗೆ ಎಲ್ಲಾ ಕಡೆ ತೊಡಗಂತ್ತಿದ್ದಾರೆ. ಸುಳ್ಳು ಪತ್ರ ಪಡೆದು ಹಣವನ್ನು ವಸೂಲಿ ಮಾಡಿ ಇಂತಹ ಒಂದು ಅವ್ಯವಹಾರದಲ್ಲಿ ತೊಡಗಿದ್ದಾರೆ. ಮಾನ್ಯ ಸಮಾಜ ಕಲ್ಯಾಣ ಮಂತ್ರಿಯವರು ಈ ಬಗ್ಗೆ ತನಿಖೆ ಮಾಡಬೇಕು. ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಾದರೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ೨ ತಿಂಗಳ ಹಿಂದೆ ಏನು ಮಾಡಿದ್ದಾರೆ ಎಂಬುದನ್ನು ಹೇಳಬೇಕಾಗುತ್ತದೆ. ಕ್ರಮ ತೆಗೆದುಕೊಳ್ಳಬಾರದು ಎಂದು ಹೈಕೋರ್ಟಿನವರಿಗೆ ಹೇಳಿದ್ದಾರೆ. ಯಾವ ಕೋರ್ಟಿನಲ್ಲೂ ಚರ್ಚೆಗೆ ತೆಗೆದುಕೊಳ್ಳಬಾರದು ಎಂದು ಹೈಕೋರ್ಟಿನಲ್ಲೂ ಕೂಡಾ ಸೂಕ್ತವಾದ ಸಲಹೆ ಕೊಟ್ಟಿದ್ದಾರೆ. ರಾಜ್ಯಾಂಗದ ಪ್ರಕಾರ ಯಾರು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೋ ಅಂತಹವರಿಗೆ ತಾಕೀತು ಮಾಡಿ ಅದನ್ನು ತೆಗೆದುಕೊಳ್ಳಬಾರದು ಎಂದು ಹೇಳಿದ್ದಾರೆ. ಇವರು ಹೇಳಿರತಕ್ಕದ್ದರ ಬಗ್ಗೆ ನಾನು ನೇರವಾಗಿ ಆಪಾದನೆ ಮಾಡುತ್ತೇನೆ. ನಾನು ತಿಳಿದಿದ್ದನ್ನು, ಕೇಳಿದ್ದನ್ನು ಇಲ್ಲಿ ಹೇಳುತ್ತಿದ್ದೇನೆ. ಈ ಒಂದು ಸುಳ್ಳು ಸರ್ಟಿಫಿಕೇಟ್ ವಿಚಾರದಲ್ಲಿ ಸ್ಪಷ್ಟವಾದ ಒಂದು ನಿಲುವನ್ನು ತಾಳಬೇಕು. ರಾಜ್ಯಾಂಗಕ್ಕೆ ನಾವು ಭಾಗಿಗಳಾಗಿದ್ದೇವೆ. ನಾವು ಇದಕ್ಕೆ ವಿರುದ್ಧ ಮಾಡಿದರೆ ರಾಜ್ಯಾಂಗಕ್ಕೆ ಅಪಚಾರ ಮಾಡಿದ ಹಾಗೆ ಆಗುತ್ತದೆ. ರಾಜ್ಯಾಂಗದ ಪ್ರಕಾರ ಹಿಂದುಳಿದ ವರ್ಗದವರು ಹಾಗೂ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ನ್ಯಾಯವನ್ನು ಒದಗಿಸಬೇಕೆಂದು ಹೊರಟಿದ್ದೇ ಅಂತಹವರ ಅನ್ನವನ್ನು ಇದರಿಂದಾಗಿ ಕಿತ್ತು ಬೇರೆಯವರಿಗೆ ಕೊಟ್ಟ ಹಾಗೆ ಆಗುತ್ತದೆ. ಈ ಬಗ್ಗೆ ನಾನು ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ರಾಜ್ಯಾಂಗದ ಆರ್ಟಿಕಲ್ ೩೪೧ನ್ನು ನಾನು ಓದುತ್ತೇನೆ.

"The President may with respect to any State or Union territory, and where it is a State, after consultation with the Governor thereof, by public notification, specify the castes, races or tribes or parts of or groups within castes, races or tribes which shall for the purpose of this Constitution be deemed to be Scheduled Castes in relation to that State or Union territory, as the case may be."

The more important of this clause is :

"(2) Parliament may by law include in or exclude from the list of Scheduled Castes specified in a notification issued under clause (1) any caste, race or tribe or part of or group within any caste, race or tribe, but save as aforesaid a notification issued under the said clause shall not be varied by say subsequent notification."

ಎಂದರೆ ೧೯೫೦ನೇ ಇಸವಿಯಲ್ಲಿ ಏನು ರಾಜ್ಯಾಂಗ ಜಾರಿಗೆ ಬಂತು ಆಗ ಪ್ರೆಸಿಡೆಂಟರು ಒಂದು ಪುಕ್ಕುಂ ಮಾಡಿದ್ದಾರೆ, ಆಜ್ಞೆ ಮಾಡಿದ್ದಾರೆ ಅದರ ಪ್ರಕಾರ ಈಗ ಕರ್ನಾಟಕದಲ್ಲಿ Scheduled Castes ಬಗ್ಗೆ 'Constitution Scheduled Caste Order, 1959' ಇದೆ.

ಕೆ–೩೦ ಪಿ. ಎಂ.

ಕಾನ್ಸ್ಟಿಟ್ಯೂಷನ್ ೧೯೫೦ರ ಪ್ರಕಾರ ಯಾವ ಯಾವ ಜಾತಿಗಳು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಪಟ್ಟಿಯಲ್ಲಿ ಸೇರಿವೆ ಆ ಜಾತಿಯವರು ಮಾತ್ರ ಎಸ್.ಸಿ. ಅಥವಾ ಎಸ್.ಟಿ. ಯಲ್ಲಿ ಒರುತ್ತಾರೆ ಅವರನ್ನು ಬಿಟ್ಟು ಬೇರೆ ಜಾತಿಯವರು ಎಸ್.ಸಿ., ಎಸ್.ಟಿ. ನಲ್ಲಿ ಬರುವುದಿಲ್ಲ, ಅವರು ಎಸ್.ಸಿ., ಎಸ್.ಟಿ. ಗಳಲ್ಲ ಎಂದು ಹೇಳುವಂಥ ಒಂದು ಮಾತನ್ನು ಸುಪ್ರೀಂ ಕೋರ್ಟ್‌ನವರು ಹೇಳಿದ್ದಾರೆ. ಇದನ್ನು ಪ್ರೆಸಿಡೆಂಟ್‌ರವರು ಮಾಡಿದ್ದರು. ಆಲ್ಲಿಂದೀಚೆಗೆ ಪಾರ್ಲಿಮೆಂಟ್‌ನಲ್ಲೂ ಕೂಡ ಇದನ್ನು ಬದಲಾವಣೆ ಮಾಡಿಲ್ಲ. ಇತ್ತೀಚೆಗೆ ಏನಾಗಿದೆ ಎಂದರೆ, ಯಾವ ಯಾವ ವ್ಯಕ್ತಿಗಳು ಪ್ರಬಲರಾದವರು ಮಂತ್ರಿಗಳಾಗಿ ಬರುತ್ತಾರೋ ಅವರು ತಮ್ಮ ತಮ್ಮ ಜಾತಿಯವರನ್ನು ಎಸ್.ಸಿ. ಅಥವಾ ಎಸ್.ಟಿ. ಗೆ ಸೇರಿಸುತ್ತಿದ್ದಾರೆ. ಅದೇ ರೀತಿಯಲ್ಲಿ ಬಂದಂಥ ಸರ್ಕಾರಗಳೂ ಕೂಡ ಈ ಒತ್ತಡಕ್ಕೆ ಮಣಿದು ಅದೇ ಕೆಲಸವನ್ನು ಮಾಡುತ್ತಿವೆ ; ಅದಕ್ಕೆ ಅನುಮೋದನೆ ನೀಡುತ್ತಿದೆ. ಉದಾಹರಣೆಗೆ ಹೇಳುವುದಾದರೆ ಹುಣಸೂರು ತಾಲೂಕಿನಲ್ಲಿ ಜೇನು ಕುರುಬರು, ಕಾಡು ಕುರುಬರು ಎಂದು ಇದ್ದಾರೆ. ಇವರು ಯಾವಾಗಲೂ ಕಾಡಿನಲ್ಲೇ ವಾಸ ಮಾಡತಕ್ಕವರು. ಇವರು ಕಾಡನ್ನು ಬಿಟ್ಟು ಹೊರಗೆ ಬರುವುದಿಲ್ಲ. ಇವರು ಮರದ ಎಲೆಗಳನ್ನು ಸುತ್ತಿಕೊಂಡಿರುತ್ತಾರೆ, ಇಲ್ಲವೇ ಬೆತ್ತಲೆ ಇರುತ್ತಾರೆ. ಇವರು ಅನಾಗರೀಕ ಜನ. ನಾನು ಇವರನ್ನು ಕಣ್ಣಾರೆ ನೋಡಿ ನಾನು ಸಹಾಯ ಮಾಡಿದ್ದೇನೆ. ನಮ್ಮಲ್ಲಿರುವವರು ಊರು ಕುರುಬರು. ನಮ್ಮ ಕರ್ನಾಟಕದಲ್ಲಿ ಸುಮಾರು ೫೦–೪೦ ಲಕ್ಷ ಕುಟುಂಬಗಳಿವೆ. ಇವರಿಗೆ ಎಲ್ಲ ಸೌಲಭ್ಯಗಳೂ ಸಿಕ್ಕುತ್ತಿವೆ. ಇತ್ತೀಚೆಗೆ ಏನಾಗುತ್ತಿದೆ, ಕಾಡು ಕುರುಬರು ಮತ್ತು ಜೇನು ಕುರುಬರಿಗೆ ಸರ್ಕಾರ ಏನು ಸೌಲಭ್ಯಗಳನ್ನು ಕೊಡುತ್ತಿವೆ ಅದನ್ನು ಈ ಊರು ಕುರುಬರೂ ತೆಗೆದುಕೊಳ್ಳುವ ಸಲುವಾಗಿ ಯಾರು ಕುರುಬ ಎಂದು ಇರುತ್ತಾನೆ, ಅವನು "ಕುರುಬ" ಎಂಬುದರ ಹಿಂದೆ "ಕಾಡು" ಅಥವಾ "ಜೇನು" ಎಂದು ಸೇರಿಸಿಕೊಳ್ಳುತ್ತಿದ್ದಾರೆ. ಅಧಿಕಾರಿಗಳು ಪ್ರಮಾಣ ಪತ್ರಗಳನ್ನು ಕೊಡುವಾಗ "ಜೇನು ಕುರುಬ" ಕಾಡು ಕುರುಬ" ಎಂದು ಸೇರಿಸಿ ಕೊಡುತ್ತಿರುವುದರಿಂದ ನಿಜವಾಗಿಯೂ ಕಾಡಿನಲ್ಲಿ ವಾಸ ಮಾಡುತ್ತಿರುವ ಕಾಡು ಕುರುಬರಿಗೆ, ಅಥವಾ ಜೇನು ಕುರುಬರಿಗೆ ಏನು ಸೌಲಭ್ಯ ಸಿಕ್ಕಬೇಕೋ ಅದು ಸಿಕ್ಕುತ್ತಿಲ್ಲ. ಅವರಿಗೆ ಕೊಡತಕ್ಕ ಅನ್ನವಪನ್ನ ಕಿತ್ತು ಬೇರೆಯವರಿಗೆ ಕೊಡತಕ್ಕ ಕೆಲಸ ಅಧಿಕಾರಿಗಳಿಂದ ನಡೆಯುತ್ತಿದೆ. ಇದು ಬಹಳ ಹೇಯವಾದುದು.

ಮಾನ್ಯ ಅಧ್ಯಕ್ಷರೆ. ಇನ್ನೊಂದು ಬಹಳ ಪ್ರಮುಖವಾದ ವಿಚಾರ ಏಂದರೆ.....

ಅಧ್ಯಕ್ಷರು.—ತಾವು ಕ್ಲಾರಿಫಿಕೇಷನ್ ಕೇಳಿ. ನಾಳೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನ ಡಿಮ್ಯಾಂಡ್ ಬಂದಾಗ ಏನು ಹೇಳಬೇಕೋ ಹೇಳುವಿರಂತೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಪೆಡ್ಡೂಲ್ಡ್ ಟ್ರೈಬ್‌ನಲ್ಲಿ ''ನಾಯಕರ'' ಎಂದು ಇದೆ. ಈ ಜಾತಿಯ ಜನರು ಗುಜರಾತ್ ಕಡೆಯಿಂದ ಬಂದಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೧೫–೧೬ ಕುಟುಂಬಗಳು ಈ ಜಾತಿಗೆ ಸೇರಿದವರಿದ್ದಾರೆ. ಕಪಾಡಿಯ ನಾಯಕ, ಚೋಳಿವಾಡ ನಾಯಕ, ಮೋಟ ನಾಯಕ, ನಾನಾ ನಾಯಕ, ಎಂದು ಇದೆ. ನಾಯಂಕರೆ ಎಂಬುದು ಒಂದು ಜಾತಿ ಇದರಲ್ಲಿ ಸಿನಾನಿಮ್ಸ್ ಇದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ''ನಾಯಂಕರು'' ಎನ್ನುವವರು ಬ್ರಾಹ್ಮಣರಲ್ಲೂ ಇದ್ದಾರೆ. ಲಿಂಗಾಯಿತರಲ್ಲೂ ಇದ್ದಾರೆ, ಮತ್ತು ಬೇರೆ ಜಾತಿಯಲ್ಲಿಯೂ ಇದ್ದಾರೆ. ಅವರೂ ಕೂಡ ''ನಾಯಕ'' ಎನ್ನುವ ಸರ್ಟಿಫಿಕೇಟ್‌ನ್ನು ತೆಗೆದುಕೊಂಡು ಸರ್ಕಾರದಿಂದ ಕೊಡತಕ್ಕ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ.....

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳುತ್ತಿದ್ದಾರೋ, ಡಿಸ್ಕಷನ್‌ಗೆ.....

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ. ನೋಟೀಸ್‌ಗೆ ಯಾರು ಯಾರು ಸಹಿ ಹಾಕಿದ್ದಾರೆ ಅವರು ಮಾತ್ರ ಮಾತನಾಡಲು ಅವಕಾಶ ಇದೆ.

ಶ್ರೀ ವೀರಣ್ಣ.—ಸ್ವಾಮಿ, ಮಾನ್ಯ ಸದಸ್ಯರಿಗೆ ವಿಷಯ ಚೆನ್ನಾಗಿ ಗೊತ್ತಿದೆ. ಈಗ ಅವರು ಕೇವಲ ಕ್ಲಾರಿಫಿಕೇಷನ್ ಮಾತ್ರ ಕೇಳಬೇಕು. ಅದು ಬಿಟ್ಟು ಭಾಷಣ ಮಾಡುವುದು ಸರಿಯಲ್ಲ. ಅವರು ಈ ವಿಚಾರದಲ್ಲಿ ಪೂರ್ಣ ಚರ್ಚೆ ಮಾಡಬೇಕಾದರೆ ಇದನ್ನು ಬೇರೆ ರೀತಿಯಲ್ಲಿ ಸಭೆಯ ಮುಂದೆ ತರಲಿ. ಇಲ್ಲಿ ಜೇನು ಕುರುಬ, ಕಾಡು ಕುರುಬ ಎಂದು ಹೇಳುತ್ತಿದ್ದಾರೆ.....

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ.

ಶ್ರೀ ವೀರಣ್ಣ.—ಮಾನ್ಯ ಸದಸ್ಯರಿಗೆ ತಾವು ಹೇಳಬೇಕು.

ಅಧ್ಯಕ್ಷರು.—ಬಸವಲಿಂಗಪ್ಪನವರೇ, ನಾಳೆ ಬೆಳಿಗ್ಗೆ ನೀವೇ ಮೊದಲು ಮಾತನಾಡಿ. ಈಗಾಗಲೇ ತಾವು ಸಾಕಷ್ಟು ಸಮಯವನ್ನು ತೆಗೆದುಕೊಂಡಿದ್ದೀರಿ. ದಯವಿಟ್ಟು ವಿವರಣೆಯನ್ನು ಮಾತ್ರ ಕೇಳಿ.

ಶ್ರೀ ಬಸವಲಿಂಗಪ್ಪ.—ಸ್ವಾಮಿ, ಮಹಾರಾಷ್ಟ್ರದಲ್ಲಿ.....

(ಗೊಂದಲ)

ಶ್ರೀ ಬಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವಲಿಂಗಪ್ಪನವರಿಗೆ ಮಾತನಾಡಲು ಅವಕಾಶ ಕೊಟ್ಟರೆ ಬೇರೆಯವರಿಗೂ ಅವಕಾಶವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಬಸವಲಿಂಗಪ್ಪನವರೇ, ತಾವು ಹೇಳುತ್ತಿರುವುದರಲ್ಲಿ ಸತ್ಯಾಂಶ ಇದೆ. ನಾಳೆಯ ದಿವಸ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆ ಬಂದಾಗ ತಾವು ಮಾತನಾಡಬಹುದು ಈಗ ಕೇವಲ ಕ್ಲಾರಿಫಿಕೇಷನ್ ಮಾತ್ರ ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ನಾನು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಆದರೆ.....

ಅಧ್ಯಕ್ಷರು.—ನೀವು ಶಾಸಕರಾಗಿ ಕೆಲಸ ಮಾಡಿದ್ದೀರಿ. ಮತ್ತು ಸಚಿವರಾಗಿಯೂ ಕೆಲಸ ಮಾಡಿದ್ದೀರಿ. ಒಳ್ಳೆಯ ಅನುಭವ ಇರತಕ್ಕ ನೀವೇ ಈ ರೀತಿ ಮಾತನಾಡುತ್ತಾ ಹೋದರೆ ಸಭೆಯನ್ನು ನಾನು ಯಾವ ರೀತಿ ನಡೆಸಬೇಕು ನೀವೇ ಹೇಳಿ ?

ಶ್ರೀ ಬಿ. ಬಸವಲಿಂಗಪ್ಪ.—ತಾವು ದಯವಿಟ್ಟು ನನಗೆ ಅವಕಾಶ ಕೊಡಬೇಕು.

'Complaints have been received that in several instances the real beneficiaries are being harassed by resorting to legal action.'

ಎಂದು ಹೇಳಿದ್ದೀರಿ. ಇದರ ಅರ್ಥ ಏನು ಎಂಬುದನ್ನು ಹೇಳಿ.....

ಅಧ್ಯಕ್ಷರು.—ತಾವು ಕ್ಲಾರಿಫಿಕೇಷನ್ ಕೇಳಿ, ಎಕ್ಸಾಮಿನೇಷನ್, ಕ್ರಾಸ್ ಎಕ್ಸಾಮಿನೇಷನ್ ಮಾಡುವುದಕ್ಕೆ ಇಲ್ಲಿ ಅವಕಾಶ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ನನಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ತಾನು ಎಸ್.ಸಿ., ಎಸ್.ಟಿ. ಎಂದು ಯಾರಾದರೂ ಸುಳ್ಳು ಪ್ರಮಾಣ ಪತ್ರಗಳನ್ನು ತೆಗೆದುಕೊಂಡು ಕೆಲಸಕ್ಕೆ ಸೇರಿದ್ದಾರೊ ಅಂಥವರ ಮೇಲೆ ಏನು ಕಠಿಣ ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ಹೇಳಬೇಕು.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಾದ ಕೆ. ಎಚ್. ಪಾಟೀಲರು, ಬಸವಲಿಂಗಪ್ಪನವರು, ಕೃಷ್ಣನ್‌ರವರು, ಯಡಿಯೂರಪ್ಪನವರು, ಕಣ್ಣನ್‌ರವರು ಮತ್ತು ಭೂಪತಿ ಇವರುಗಳು ಕಾಲಿಂಗ್ ಅಟೆನ್‌ನಷನ್ ನೋಟೀಸಿಗೆ ಸಹಿ ಹಾಕಿದ್ದಾರೆ, ಸಾಧಾರಣವಾಗಿ ಸಂಳ್ಳು ಸರ್ಟಿಫಿಕೇಟ್‌ಗಳನ್ನು ಕೊಡುತ್ತಿರುವುದರಿಂದ ಅರ್ಹ ಜಾತಿಯವರಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ ಸಂಳ್ಳು ಸರ್ಟಿಫಿಕೇಟ್ ಕೊಡುತ್ತಿರುವವರಿಗೆ ಸೂಕ್ತ ಎಚ್ಚರಿಕೆಯನ್ನು ಕೊಡಬೇಕೆಂದು ಈ ಗಮನ ಸೆಳೆಯುವ ಸೂಚನೆಯನ್ನು ಕಳಂಹಿಸಿದ್ದಾರೆ. ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವುದರಿಂದ ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸಂಬಂಧಪಟ್ಟವರಿಗೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ನಾನು ಸಮಾಜ ಕಲ್ಯಾಣ ಖಾತೆಯ ಸಚಿವನಾದ ಮೇಲೆ ಅನೇಕ ಕಡೆಗಳಿಂದ ನನಗೆ ದೂರುಗಳು ಬಂದಿವೆ. ವಿದ್ಯಾರ್ಥಿಗಳಿಂದ, ಹೆಚ್.ಎ.ಎಲ್. ನಿಂದ, ಬಿ.ಇ.ಎಲ್. ನಿಂದ, ಅಂಚೆ ಮತ್ತು ತಂತಿ ಇಲಾಖೆಯಿಂದ, ಸರ್ಕಾರೀ ಇಲಾಖೆಗಳಿಂದ, ಸ್ಥಳೀಯ ಸಂಸ್ಥೆಗಳಿಂದ ಕೂಡ ದೂರುಗಳು ಬಂದಿವೆ. ಇದನ್ನೆಲ್ಲಾ ನಾನು ಪರಿಶೀಲಿಸಿದಾಗ ಇದರಲ್ಲಿ ಕೆಲವು ವಿಚಾರಗಳು ಸತ್ಯವಾಗಿವೆ, ಅರ್ಹರಾದವರಿಗೆ ತೊಂದರೆಯಾಗಿದೆ ಎಂಬುದು ತಿಳಿದು ಬಂತು. ಕೆಲವು ಪ್ರಕರಣಗಳಲ್ಲಿ ಕೇಸು ಕೂಡ ಆಗಿದೆ. ಇದು ಒಂದು ರೀತಿಯಾದರೆ, ಇನ್ನೊಂದು ರೀತಿಯಲ್ಲಿ ಡಿ ಐ.ಜಿ. ಯವರು ಎನ್‌ಕ್ವೈರಿ ಮಾಡಿದಾಗ ಕೆಲವರಿಗೆ ಕೊಟ್ಟ ರತಕ್ಕ ಸರ್ಟಿಫಿಕೇಟ್ ಸರಿಯಾಗಿದೆ, ಅದಗ ಪ್ರಕಾರ ಅವರಿಗೆ ಕೆಲಸವನ್ನು ಕೊಟ್ಟಿರುವುದೂ ಸರಿಯಾಗಿದೆ ಎಂದು ಹೇಳಿದ್ದಾರೆ. ಯಾವುದೇ ದೂರು ಬಂದರೂ ಅದರ ಬಗ್ಗೆ ತನಿಖೆ ನಡೆಸಂವುದು ಸರ್ಕಾರದ ಕರ್ತವ್ಯ. ಮಾನ್ಯ ಸದಸ್ಯರಿಗೆ ಇರುವಂತೆಯೇ ನಮಗೂ ಕಳಕಳಿ ಈ ವರ್ಗದ ಜನರ ಮೇಲಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ನನ್ನ ಆರೋಪ ಎಂದರೆ ಇವರು ನ್ಯಾಯಾಲಯಕ್ಕೆ ನಿರ್ದೇಶನ ಕೊಟ್ಟಿದ್ದಾರೆಯೇ ಎಂದು ಕೇಳುತ್ತಿದ್ದೇನೆ. ಇದಕ್ಕೆ ಸಚಿವರು ಏನು ಹೇಳುತ್ತಾರೆ ? ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಸ್ವಾಮಿ, ನಮ್ಮ ಸಮಾಜದಲ್ಲಿರತಕ್ಕ ಹಲವಾರು ಜಾತಿಗಳ ಪೈಕಿ ಬೇಡ ಕುರುಬ, ಜಂಗು ಕುರುಬ, ಕೋಳಿ ಮರಾಟ, ಇದರಲ್ಲೇ ಕೋಳಿ ಮರಾಠ, ನಾಯಕ, ಬೇಡ ನಾಯಕ, ಮುಂತಾದ ೧೭ ಸಮಾಜದವರುಗಳಿಂದ ನನಗೆ ತಕರಾರು ಅರ್ಜಿಗಳು ಬಂದಿವೆ.

ಲಿಂಗಾಯಿತರಲ್ಲೂ ಕೆಲವರು ಇದ್ದಾರೆ, ಕ್ರಿಶ್ಚಿಯನ್‌ರಲ್ಲೂ ಇದ್ದಾರೆ. ಇಂಥ ಬೇರೆ ಬೇರೆ ಹದಿನೇಳು ಸಮಾಜದವರಲ್ಲಿ ಸಾಧಾರಣವಾಗಿ ಇದ್ದಂಥ ತಕರಾರಿನಿಂದ ನನ್ನ ಕಡೆ ಬರುತ್ತಾರೆ. ಅದನ್ನು ಸಾಧಾರಣವಾಗಿ ಯೋಚನೆ ಮಾಡಬೇಕು ಎನ್ನುವ ದೃಷ್ಟಿಯಿಂದ ಇದ್ದೇನೆ. ಇತ್ತೀಚೆಗೆ ಸರ್ಕಾರಕ್ಕೂ ನನಗೂ ಕೆಲವು ತೊಂದರೆಗಳು ಬಂದಿದ್ದರೂ ಅದನ್ನು ಕ್ಯಾಬಿನೇಟ್ ಮುಂದೆ ತರತಕ್ಕಂಥದ್ದು ನನ್ನ ಕರ್ತವ್ಯವೆಂದು ತಿಳಿದುಕೊಂಡಿರುತ್ತೇನೆ. ಮಹಾರಾಷ್ಟ್ರದಲ್ಲೂ ಕೂಡ ಇಂಥ ಪ್ರಕರಣಗಳು ಇರುತ್ತವೆ. ಅಲ್ಲಿ ಮರಾಟ, ಮರಾಟಿ ಎಂದು ಹೇಳುವವರಲ್ಲಿ ಯಾವ ಭೇದವೂ ಇಲ್ಲ. ಹಾಗೆಯೇ ಇಲ್ಲಿ ನಾಯಕ

ಬೇಡ ಎಂದು ಹೇಳುವುದರಲ್ಲಿ ಎರಡು ಒಂದೇ ಇರುತ್ತದೆ. ನನ್ನ ಜಿಲ್ಲೆ ಗೋಕಾಕ್‌ನಲ್ಲಿ ಶೆಡ್ಯೂಲ್ ಟ್ರೈಬ್ಸ್‌ನಲ್ಲಿ ನಾಯಕ ಜನರೂ ಇದ್ದಾರೆ. ಆಲ್ಲಿ ಇಲ್ಲಿ ಬಿಟ್ಟರೆ ನಾಯಕ ಜನಾಂಗದವರು ಎಲ್ಲೆಲ್ಲೂ ಇದ್ದಾರೆ. ಆದ್ದರಿಂದ ಸೆಂಟ್ರಲ್ ಗೌವರ್ನಮೆಂಟ್‌ಗೆ ರೆಪ್ರಸೆಂಟೇಷನ್ ಮಾಡತಕ್ಕಂಥದ್ದು ನಮ್ಮ ಕರ್ತವ್ಯವಾಗಿರುತ್ತದೆ. ಲಿಂಗಾಯಿತರಲ್ಲೂ ಬೇಡ ಜಂಗಮರೆಂದು ಇದ್ದಾರೆ ಸಮಾಜದಲ್ಲಿ ಹಿಂದುಳಿದವರು, ಬಡವರು ಯಾರು ಇರುತ್ತಾರೋ ಅಂಥವರಿಗೆ ಅನ್ಯಾಯವಾಗುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಆದ್ದರಿಂದ ರಿಪ್ರೆಸೆಂಟೇಷನ್ ಮಾಡುವುದು ನಮ್ಮ ಕರ್ತವ್ಯವಾಗಿರುತ್ತದೆ. ನಾನು ಒಬ್ಬನೇ ರೆಪ್ರಸೆಂಟೇಷನ್ ಮಾಡುವುದು ತಪ್ಪಾದೀತು ಎಂದು ಒಂದು ಸಮಿತಿಯನ್ನು ಮಾಡಬೇಕೆಂದಿರುತ್ತೇನೆ. ಈಗಾಗಲೇ ನಾಯಕರನ್ನು ಬಿಟ್ಟಿರುತ್ತಾರೆಂದು ಹೇಳಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿರುತ್ತೇವೆ. ಯಾವುದೇ ನಿರ್ಣಯವನ್ನು ತೆಗೆದುಕೊಳ್ಳುವ ಮೊದಲು ಕಮಿಟಿಯ ಮುಂದೆ ಬರಬೇಕೆಂದು ಹೇಳಿ, ಅಲ್ಲಿಯ ತನಕ ತಡೆಹಿಡಿಯಬೇಕೆಂದು ಹೇಳುತ್ತೇನೆ.

SRI K. H. PATIL.—Sir, the question now involved is in order to safeguard the interest of Scheduled Castes and Scheduled Tribes under the Constitution, whether the representatives of the Government *i.e.*, Hon'ble Minister for Social Welfare is prepared to implement the constitutional rights reserved for the scheduled caste and scheduled tribes.

Secondly, the Hon'ble Minister in his statement has stated that lot of representations have been received that false certificates have been produced and on the basis of the false certificates action has alreday been taken and he also says that instructions have been issued to the Officers to see that such persons should be dealt with according to law. I would like to know whether he has taken any action against any of the Government servant who has issued false certificates uptill now. It is not enough if the producer of the false certificate is only punished. I would like to know whether Goverment has prosecuted or dismissed any officer involved in issuance of such false certificates ?

ಶ್ರೀ ವಿ. ಎಲ್. ಪಾಟೀಲ್ —ಮಾನ್ಯ ಸದಸ್ಯರು ಹೇಳಿದಹಾಗೆ ಸುಳ್ಳು ಸರ್ಟಿಫಿಕೇಟ್ ಕೊಟ್ಟಿರುವಂಥವರ ಬಗ್ಗೆ ಬಹಳ ಉಗ್ರವಾದ ಕ್ರಮ ತೆಗೆದುಕೊಳ್ಳಿ ಎಂದು ಹೇಳಿ ಎಲ್ಲ ಕಡೆಗೂ ತಿಳಿಸಿದ್ದೇವೆ. ಹಿಂದೆ ಏನೇನಾಗಿದೆ ಅದನ್ನೆಲ್ಲವನ್ನು ಪರಿಶೀಲನೆ ಮಾಡುತ್ತೇನೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

SRI K. H. PATIL —They may take action lateron. We would like to know what action has been taken uptill now when the matter has been brought to the Notice of the Hon'ble Minister, regarding production of false certificates. What action has been taken against the Officers.

ಶ್ರೀ ವಿ. ಎಲ್. ಪಾಟೀಲ್.—ನನ್ನ ಮುಂದೆ ಈಗಾಗಲೇ ಸಸ್‌ಪೆಂಡ್ ಆಗಿರತಕ್ಕಂಥ ಪ್ರಕರಣಗಳು ಬಂದಿದೆ. ಉದಾಹರಣೆಗೆ ಹೇಳುತ್ತೇನೆ, ಬೇಡರಲ್ಲೂ ಸಹ ತಂದೆ ನಾಯಕ, ಮಗ ನಾಯಕನೆಂದಂ ಹೇಳಿ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡಿರತಕ್ಕಂಥ ಕೇಸಸ್ ಬಂದಿರುತ್ತದೆ. ಈ ರೀತಿಯಾಗಿ ಬಂಗ್ಲಿಂಗ್ ತಗಿರುವುದರಿಂದ ಇದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

SRI K. H. PATIL.— Mr. Speaker, Sir, it is not the answer. What I would like to know is, after the Government received representation about production of false certificates by some persons whether the Government has taken any action against anybody till this moment ?

ಶ್ರೀ ವಿ. ಎಲ್. ಪಾಟೀಲ್.— ೭೩೭ ಜನರು ಇದ್ದಾರೆ. ಅವರ ಮೇಲೆ ಸೂಕ್ತ ಕ್ರಮ ತೆಗೆದು ಕೊಳ್ಳಲು ಅವರ ಕಾಲದಲ್ಲೇ ಇದ್ದುದು. ನಾವು ಅಧಿಕಾರಕ್ಕೆ ಬಂದಮೇಲೆ ಆದುದೇನಲ್ಲ, ಏತಕ್ಕೆ ಹೀಗೆ ಆಯಿತು, ಮತ್ತೆ ಏತಕ್ಕೆ ಕ್ರಮತೆಗೆದುಕೊಳ್ಳಲಿಲ್ಲವೆಂಬುದರ ಬಗ್ಗೆ ನಾನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಆರ್. ಪೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ ಈ ಸಮಸ್ಯೆ ಉದ್ಭವವಾಗಿರತಕ್ಕಂಥದ್ದು ಸರ್ಟಿಫಿಕೇಟ್ ಕೊಡುವಾಗ, ಇದರ ಬಗ್ಗೆ ಪುನರಾಲೋಚನೆ ಮಾಡಬೇಕು. ಮಕ್ಕಳು ಶಾಲೆಗೆ ಸೇರಿ ಕೊಳ್ಳುವಾಗಲೇ ಒಳ್ಳೆಯ ರಿಕಾರ್ಡನ್ನು ಸೃಷ್ಟಿಮಾಡಿದರೆ ಈ ರೀತಿಯಾದ ತೊಂದರೆಗಳಿಗೆ ಅವಕಾಶ ವಾಗುವುದಿಲ್ಲ. ಈರೀತಿ ಮಾಡಿದರೆ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗಕ್ಕೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ವಿ. ಎಲ್. ಪಾಟೀಲ್.— ಮಾನ್ಯ ಸದಸ್ಯರು ಹೇಳಿದಹಾಗೆ ಎಲ್ಲ ಕಡೆಗೂ ಇನ್‌ಸ್ಪೆಕ್ಷನ್ ಕೊಡುತ್ತೇನೆ. ನಿಯಮದ ಪ್ರಕಾರ ಎಲ್ಲೆಲ್ಲಿ ನಡೆಯುವುದಿಲ್ಲ, ಅಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ

ಶ್ರೀ ಬಿ. ಎಸ್. ಯಡಿಯೂರಪ್ಪ.— ರಾಜ್ಯಾಂಗದ ಪ್ರಕಾರವಾಗಿ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗದವರಿಗೆ ಯಾವ ಯಾವ ಸೌಲಭ್ಯಗಳು ದೊರೆಯುತ್ತದೋ ಆ ಸೌಲಭ್ಯ ಗಳನ್ನು ಬೇರೆಯವರು ದುರುಪಯೋಗ ಮಾಡಿಕೊಳ್ಳತಕ್ಕಂಥ ಪ್ರಕರಣಗಳು ಬೆಳಕಿಗೆ ಈಗಾಗಲೇ ಬಂದಿರುತ್ತದೆ. ದೂರುಗಳು ಬಂದಿರುವ ಬಗ್ಗೆಯೂ ಕೂಡ ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಿರುವಾಗ ಈ ಎಲ್ಲ ಪ್ರಕರಣಗಳನ್ನು ಹಗುರವಾಗಿ ತೆಗೆದುಕೊಳ್ಳಬಾರದು. ನಿಮಗೆ ಹೇಗೆ ಕಳಕಳಿ ಇರುತ್ತದೆಯೋ ಅದೇ ಪ್ರಕಾರವಾಗಿ ನಮಗೂ ಕಳಕಳಿ ಇರುತ್ತದೆ. ಷೆಡ್ಯೂಲ್‌ಕ್ಯಾಸ್ಟ್ ಸಮಿತಿಯಲ್ಲಿ ಒಂದು ವರ್ಷ ನಾನು ಕೆಲಸ ಮಾಡಿದ್ದೇನೆ. ಏನು ಅನ್ಯಾಯ ನಡೆಯುತ್ತಿದೆ ಎಂಬುದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಶಿಕಾರಿಪುರ ತಾಲ್ಲೂಕಿನಲ್ಲಿ ಬೇರೆ ಬೇರೆ ಜನಾಂಗದವರು ಸುಳ್ಳು ಸರ್ಟಿಫಿಕೇಟ್‌ನ್ನು ತೆಗೆದುಕೊಂಡು ಡಾಕ್ಟರ್, ಇಂಜಿನೀಯರ್ ಅಂಥ ಉನ್ನತ ಪದವಿಯಲ್ಲಿ ಇರುತ್ತಾರೆ. ಕೋರ್ಟಿನಲ್ಲಿ ಕೇಸ್ ನಡೆಯುತ್ತಿದೆ.

ಏತಕ್ಕೆ ಈ ಪ್ರಾತನ್ನು ಹೇಳುತ್ತಿದ್ದೇನೆ ಎಂದರೆ ಈ ತರಹ ದುರುಪಯೋಗ ಮಾಡತಕ್ಕಂಥವರು ಸಾಮಾನ್ಯ ಜನರು ಅಲ್ಲ. ರಾಜಕೀಯ ಪ್ರಭಾವದಿಂದ ಸ್ಥಾನಮಾನ ಹೊಂದುವುದಕ್ಕೋಸ್ಕರ ಕೆಲವರು ಇದನ್ನು ಮಾಡುತ್ತಿದ್ದಾರೆ. ರಾಜ್ಯಾಂಗದಲ್ಲಿ ಸಿಗಬೇಕಾದ ಸೌಲಭ್ಯ ಸಿಗಬೇಕಾದವರಿಗೆ ಸಿಗದೆ ಅವರ ಹೆಸರಿನಲ್ಲಿ ಬೇರೆಯವರು. ರಾಜಕೀಯ ಪ್ರಭಾವ ಇರತಕ್ಕಂಥವರು ಸ್ಥಾನಮಾನ ಹೊಂದುವ ಪ್ರಯತ್ನ ಮಾಡುತ್ತಿದ್ದಾರೆ. ಪ್ರವೇಶನ್ ಪಡೆಯುವ ಬಗ್ಗೆ, ಇಂಜಿನಿಯರಿಂಗ್ ಅಥವಾ ಮೆಡಿಕಲ್ ಕೋರ್ಸಿಗೆ ಪ್ರವೇಶ ಪಡೆದು ಇಂಜಿನಿಯರ್, ಡಾಕ್ಟರ್ ಎನಿಸಿಕೊಳ್ಳುವ ಪ್ರಯತ್ನ ದಲ್ಲಿ ಇಂತಹ ಅನ್ಯಾಯಗಳು ಆಗಿವೆ. ಈ ರೀತಿ ಯಾವ ಕಾಲದಲ್ಲೂ ಮಾಡಿಲ್ಲ. ನನ್ನ ಕ್ಷೇತ್ರವಾದ ಶಿಕಾರಿಪುರ ತಾಲ್ಲೂಕಿನಲ್ಲೇ ಇಂತಹ ಸ್ಥಾನಮಾನ ಹೊಂದಿದವರು ಬಹಳ ಪ್ರಮಾಣದಲ್ಲಿ ಇದ್ದಾರೆ. ಆದಕಾರಣ ಇಂತಹ ಪ್ರಕರಣಗಳು ಕಣ್ಣಿಗೆ ಬಿದ್ದ ಮೇಲೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳಬೇಕು ಮತ್ತು ಇನ್ನು ಮುಂದಾದರೂ ಇಂಥ ಪ್ರಕರಣಗಳು ಆಗದಂತೆ ಜವಾಬ್ದಾರಿಯನ್ನು ಸರ್ಕಾರ ತೆಗೆದು ಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೇ.....

ಅಧ್ಯಕ್ಷರು.— ನಿಮಗೆ ಅವಕಾಶ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಈ ಗಮನ ಸೆಳೆಯುವ ಸೂಚನೆಯಲ್ಲಿ ನಾನೂ ಕೂಡ ಹೆಸರು ಕೊಟ್ಟಿದ್ದೆ. ಆದರೆ ನನ್ನ ಹೆಸರು ಬಿಟ್ಟುಹೋಗಿರುವುದರಿಂದ ನನಗೆ ತಾವು ಅವಕಾಶ ಕೊಡಬೇಕು

ಅಧ್ಯಕ್ಷರು.— ಈಗಿನ ನಿಯಮದಂತೆ ಐದು ಮಂದಿಗಿಂತ ಹೆಚ್ಚು ಹೆಸರು ಹಾಕಲಿಕ್ಕೆ ಬರುವುದಿಲ್ಲ. ಆದರೂ ನಿಮಗೊಂದು ಅವಕಾಶ ಕೊಡೋಣ, ಮಾತನಾಡಿ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಮಂತ್ರಿಗಳು ೧೭ ಸಮಾಜಗಳ ಹೆಸರು ಹೇಳಿ ಇದರ ಬಗ್ಗೆ ಶಿಫಾರಸ್ಸು ಕಳಿಸುತ್ತಿದ್ದೇನೆ ಎಂದು ಹೇಳುತ್ತಾರೆ. ಒಂದು ಕಡೆ ಏನಾಗಿದೆ ಎಂದರೆ ಈ ವಾಲ್ಮೀಕಿ, ಬೇಡ, ನಾಯಕ ಹಲವಾರು ಹೆಸರುಗಳು ಒಂದೇ ಬುಡಕಟ್ಟಿಗೆ ಸೇರಿದವುಗಳು ಎನ್ನುವ ವಾದ ಇದೆ. ಈ ರೀತಿಯು ಪರಿಸ್ಥಿತಿ ಇದೆ. ಬೇಡರಾದವರು ನಾಯಕ ಅಂತ ಹಾಕಿಕೊಂಡಿದ್ದಾರೆ. ನಾಯಕರಾ ಮತ್ತು ನಾಯಕ ಎರಡೂ ಇದೆ. ಹೀಗಿದ್ದರಿಂದ ಇಂತಹ ಹೆಸರುಗಳನ್ನು ಉಪಯೋಗ ಮಾಡಿಕೊಂಡು ಅನೇಕರು ಸುಳ್ಳು ಸರ್ಟಿಫಿಕೇಟುಗಳನ್ನು ಮಾಡಿಕೊಂಡಿದ್ದಾರೆ ಇಂತಹವರಿಗೆ ಏನು ಮಾಡುತ್ತೀರಿ? ಇದು ಸರಿಯೋ ತಪ್ಪೋ ಎಂದು ಸ್ಪಷ್ಟವಾಗಿ ತೀರ್ಮಾನ ಮಾಡಬೇಕು. ಎರಡನೇಯದು.....

ಅಧ್ಯಕ್ಷರು,—ಒಂದು ಅವಕಾಶ ಕೊಟ್ಟರೆ ಮತ್ತು ಎರಡನೆಯದು ಅಂತ ಶುರು ಮಾಡಿದ್ದೀರಲ್ಲ? ಹೂಂ ಬೇಗ ಹೇಳಿ ಮುಗಿಸಿಬಿಡಿ.

ಶ್ರೀ ಎಂ. ಎಸ್. ಕೃಷ್ಣನ್.— ಇದರಲ್ಲಿ ಸಂವಿಧಾನದ ಪ್ರಶ್ನೆಯೂ ಇದೆ. ಈಗಾಗಲೇ ಸರ್ಟಿಫಿಕೇಟುಗಳನ್ನು ತೆಗೆದುಕೊಂಡು ಬಿಟ್ಟಿದ್ದಾರೆ. ಅವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಕೇಂದ್ರದವರು ಒಪ್ಪಿಕೊಳ್ಳದ ಹೊರತು ಇಲ್ಲಿ ಒಪ್ಪಿಕೊಳ್ಳಬಾರದು ಅಂತ ಇದೆಯೇ? ಈ ದ್ವಂದ್ವವನ್ನು ಹೇಗೆ ಬಗೆ ಹರಿಸುತ್ತೀರಿ? ಯಾರಿಗೆ ನಿಜವಾಗಿ ತೊಂದರೆಯಾಗಿದೆ, ಇದನ್ನು ಹೇಗೆ ತಪ್ಪಿಸುತ್ತೀರಿ?

ಶ್ರೀ ವಿ. ಎಲ್, ಪಾಟೀಲ್.— ರಾಜ್ಯಾಂಗದ ಪ್ರಕಾರ ಇದನ್ನು ಜಾರಿಗೆ ತರಲಾಗುವುದು. ಈಗ ೧೭ ಜಾತಿಗಳು ಇವೆ. ಈ ಬೇಡರು, ನಾಯಕ ಅಂತ ಏನಿವೆ, ನನಗಂತೂ ವೈಯುಕ್ತಿಕವಾಗಿ ಇದರ ಬಗ್ಗೆ ಹೆಚ್ಚು ಗೊತ್ತಿಲ್ಲ. ಅದಕ್ಕಾಗಿ ಒಂದು ಕಮಿಟಿಯನ್ನು ಮಾಡುತಿದ್ದೇವೆ ಎಂದು ಹೇಳಿದ್ದೇನೆ. ಬೇರೆ ಬೇರೆ ಜಾತಿಯವರು ಒಂದು ಕಡೆ ಸೇರಿ ಆಳವಾಗಿ ಅಭ್ಯಾಸ ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಲಿಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಕಮಿಟಿ ಮಾಡುವುದಕ್ಕೆ ಮುಂಚೆ ಈಗಾಗಲೇ ಸರ್ಟಿಫಿಕೇಟುಗಳನ್ನು ಮಾಡಿಕೊಂಡು ಬಿಟ್ಟಿದ್ದಾರಲ್ಲ? ಇದಕ್ಕೇನು ಹೇಳುತ್ತೀರಿ?

ಶ್ರೀ ವಿ. ಎಲ್. ಪಾಟೀಲ್,— ಇದರ ಬಗ್ಗೆ ವಿಚಾರಮಾಡಿ.....

ಶ್ರೀ ಬಿ. ಬಸವಲಿಂಗಪ್ಪ.— ಇದು ಸಾಮಾನ್ಯವಾದ ವಿಷಯ ಅಲ್ಲ. ರಾಜ್ಯಾಂಗದ್ದವಾಗಿ ಏನೇನು ಇದೆ, ಶೆಡ್ಯೂಲ್ಡ್ ಕ್ಯಾಸ್ಟ್ ಆ್ಯಂಡ್ ಶೆಡ್ಯೂಲ್ಡ್ ಟ್ರೈಬ್ ಆರ್ಡರ್ ೧೯೫೦ ಅದರ ಪ್ರಕಾರ ಜಾರಿಗೆ ಕೊಡುತ್ತೇವೆ ಎಂದೂ ಹೇಳಿದ್ದಾರೆ. ಇದನ್ನೆಲ್ಲಾ ಪರಿಶೀಲನೆ ಮಾಡುತ್ತೇವೆ, ಸಮಿತಿ ಮಾಡುತ್ತೇವೆ, ಎಂದೂ ಹೇಳುತ್ತಿದ್ದೀರಿ. ಅಲ್ಲಿಯವರೆಗೆ ಈ ೭೩೭ ಜನ ಏನು ಇದ್ದಾರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದನ್ನು ನಿಲ್ಲಿಸತಕ್ಕದ್ದು ಸರಿಯೇ?

ಶ್ರೀ ಕೆ. ಎಸ್. ಬೀಳಗಿ.— ಇದರ ಬಗ್ಗೆ ವಿಚಾರ ಮಾಡಿ ಸೂಕ್ತ ಕ್ರಮ ತೆಗಿದುಕೊಳ್ಳುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಲಾಗುವುದು ಎಂದು ಹೇಳಿದ್ದೀರಿ. ಈ ಸಮಿತಿಯಲ್ಲಿ ಅಧಿಕಾರಿಗಳನ್ನು ಮಾತ್ರ ಸೇರಿಸಿ ಮಾಡುತ್ತೀರೋ ಅಥವಾ ಈ ಸದನದ ಶಾಸಕರನ್ನೂ ಕೂಡ ಸೇರಿಸಿ ಮಾಡುತ್ತೀರೋ?

ಅಧ್ಯಕ್ಷರು.— ಬೀಳಗಿಯವರೇ, ನಿಮ್ಮನ್ನು ಕ್ಲಾರಿಫಿಕೇಶನ್ ಕೇಳಿ ಎಂದರೆ ಬೇರೆಯೇ ಆದ ಪ್ರಶ್ನೆ ಕೇಳುತ್ತೀರಲ್ಲ?

ಶ್ರೀ ಕೆ. ಎಸ್. ಬೀಳಗಿ.— ಅಧ್ಯಕ್ಷರೇ ನಾನು ಸ್ಪಷ್ಟೀಕರಣ ಕೇಳುತ್ತಿದ್ದೇನೆ. ಈ ಸಮಿತಿಯಲ್ಲಿ ಬರೀ ಆಫೀಶಿಯಲ್ಸ್‌ನ್ನು ಹಾಕಿ ಮಾಡುತ್ತೀರೋ, ಇಲ್ಲ ನಾನ್–ಆಫೀಶಿಯಲ್ಸ್‌ನ್ನು ಹಾಕಿ ಮಾಡುತ್ತೀರೋ?

ಶ್ರೀ ವಿ. ಎ. ಲ್. ಪಾಟೀಲ್.— ಈ ಸಮಾಜಗಳಲ್ಲಿ ತಜ್ಞರು ಯಾರು ಇರುತ್ತಾರೆ ಎಂದು ಶೋಧನೆ ಮಾಡಿ ಅಂಥವರನ್ನೂ ಈ ಸಮಿತಿಯಲ್ಲಿ ಹಾಕುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗಾಗಲೇ ಮಾನ್ಯ ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಸುಮಾರು ೭೫೭ ಜನರು ಸುಳ್ಳು ಜಾತಿ ಪತ್ರ ಪಡೆದುಕೊಂಡಿರುವುದು ತಮ್ಮ ನಜರಿಗೆ ಬಂದಿದ್ದು, ಇದರ ಬಗ್ಗೆ ಅನೇಕರು ಕೋರ್ಟಿನಲ್ಲಿ ಕೇಸ್ ಹಾಕಿದ್ದಾರೆ ಎಂದು ಹೇಳಿದ್ದಾರೆ. ಹೈಕೋರ್ಟಿನಲ್ಲಿ ಕೇಸು ನಡೆಯುತ್ತಿರುವುದರಿಂದ, ಇವುಗಳ ವಿಚಾರಣೆ ನಿಲ್ಲಿಸಬೇಕೆಂದು ಸೂಚನೆ ಕೊಟ್ಟಿದ್ದೇನೆ ಎನ್ನುವ ಮಾತನ್ನು ಅವರೇ ಹೇಳಿದರು. ದುರ್ದೈವದಿಂದ ಇಂದು ಏನಾಗಿದೆ ಎಂದರೆ, ಹರಿಜನ ವಂತ್ತು ಗಿರಿಜನರಿಗೆ ಸಂಬಂಧಪಟ್ಟ ಜಾತಿ ಮತ್ತು ಹಿಂದುಳಿದ ವರ್ಗದವರಿಗೆ ಸೇರಿದ ಜಾತಿ ಇವೆರಡೂ ಸಹ ಒಬ್ಬರೇ ಮಂತ್ರಿಗಳ ಕೈಯಲ್ಲಿದೆ. ಈಗ ಸುಮಾರು ೧೭ ಬೇರೆಬೇರೆ ಜಾತಿಗಳಿಗೆ ಸೇರಿದ ವ್ಯಕ್ತಿಗಳು ತಾವು ಹರಿಜನ ಇಲ್ಲವೇ ಗಿರಿಜನರ ಗುಂಪಿಗೆ ಸೇರಿದವರೆಂದು ಸರ್ಟಿಫಿಕೇಟ್ ಪಡೆದು, ಅದರ ಆಧಾರದ ಮೇಲೆ ಕೆಲಸಕ್ಕೆ ಸೇರಿಕೊಂಡಿದ್ದಾರೆ. ಸುಮಾರು ೭೫೭ ಜನರು ಈ ರೀತಿಯಿಂದ ಫಾಲ್ಸ್ ಸರ್ಟಿಫಿಕೇಟ್‌ನಿಂದ ಕೆಲಸಕ್ಕೆ ಸೇರಿದ್ದಾರೆಂದು ಡಿ.ಐ.ಜಿ ಅವರು ತನಿಖೆ ಮಾಡಿ ವರದಿ ಕೊಟ್ಟಿದ್ದಾರೆ. ಇದರ ಒಂದು ಆಧಾರದ ಮೇಲೆ ಮಾನ್ಯ ಮಂತ್ರಿಗಳು ಈ ಜನರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಆದರೆ ಆ ರೀತಿ ಮಾಡುವುದಕ್ಕೆ ಬದಲು ಇದನ್ನು ಪರಿಶೀಲನೆ ಮಾಡಲು ಒಂದು ಕಮಿಟಿ ನೇಮಕ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದು ಸರಿಯಾದ ಕ್ರಮವಲ್ಲ. ಈ ೧೭ ಜಾತಿಯ ಜನರನ್ನು ಹರಿಜನರ ಪಟ್ಟಿಯಲ್ಲಿ ಸೇರಿಸಬೇಕೋ ಅಥವಾ ಹಿಂದುಳಿದವರ್ಗದವರ ಪಟ್ಟಿಯಲ್ಲಿ ಸೇರಿಸಬೇಕೋ ಎಂಬುದನ್ನು ಪರಿಶೀಲನೆ ಮಾಡಲು ಒಂದು ಕಮಿಟಿ ಮಾಡಿ. ಆದರೆ ಫಾಲ್ಸ್ ಸರ್ಟಿಫಿಕೇಟ್‌ನಿಂದ ಕೆಲಸಕ್ಕೆ ಸೇರಿದವರ ಬಗ್ಗೆ ಕೂಡಲೇ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು?

ಶ್ರೀ ವಿ. ಎಲ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದ ವತಿಯಿಂದ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಆದರೆ ಸರ್ಕಾರದ ಕ್ರಮವೇ ಅಂತಿಮ ತೀರ್ಮಾನವಾಗುವುದಿಲ್ಲ. ಏಕೆಂದರೆ, ನಮ್ಮ ತೀರ್ಮಾನದ ವಿರುದ್ಧ ಯಾರು ಬೇಕಾದರೂ ಹೈಕೋರ್ಟಿಗಾಗಲೀ ಇಲ್ಲವೆ, ಸುಪ್ರೀಂ ಕೋರ್ಟಿಗಾಗಲಿ ಹೋಗಬಹುದಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೀವು ತೆಗೆದುಕೊಂಡ ನಿರ್ಣಯಕ್ಕೆ ನೀವು ಮೊದಲು ಬದ್ಧರಾಗಿ. ಕೋರ್ಟಿನ ವಿಚಾರ ನೀವು ಏತಕ್ಕೆ ಪ್ರಸ್ತಾಪ ಮಾಡುತ್ತೀರಿ?

ಶ್ರೀ ವಿ. ಎಲ್. ಪಾಟೀಲ್.— ಈಗಾಗಲೇ ಸರ್ಕಾರ ಒಂದು ನಿರ್ಣಯಕ್ಕೆ ಬಂದಿದೆ. ಆದರೆ ಯಾರಾದರು ಕೋರ್ಟಿಗೆ ಹೋದರೆ ಮತ್ತು ಕೋರ್ಟಿನವರು ಏನಾದರು ತೀರ್ಮಾನ ಕೊಟ್ಟರೆ ಅದನ್ನು ನಾವು ಒಪ್ಪಬೇಕಾಗುತ್ತದೆ. ಕೋರ್ಟಿನ ಮುಂದೆ ಸಂಬಂಧಪಟ್ಟವರು ಸರಿಯಾದಂಥ ಸರ್ಟಿಫಿಕೇಟ್‌ಗಳನ್ನು ಹಾಜರ್‌ಪಡಿಸಿದರೆ ಮತ್ತು ಕೋರ್ಟಿನವರು ಅವರಂತೆ ತೀರ್ಮಾನ ಕೊಟ್ಟರೆ ನಾವು ಮತೆ ಅವನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಈಗ ಸರ್ಕಾರಕ್ಕೆ ಬಂದಿರುವ ವರದಿ ಆಧಾರದ ಮೇಲೆ ಸಂಬಂಧಪಟ್ಟವರ ಮೇಲೆ ಏತಕ್ಕೆ ಕ್ರಮ ಕೈಗೆದುಕೊಳ್ಳಬಾರದೆಂದು ಅವರು ಕೇಳುತ್ತಿದ್ದಾರೆ.

ಶ್ರೀ ವಿ.ಎಲ್. ಪಾಟೀಲ್.—ಆ ವರದಿ ಆಧಾರದ ಮೇಲೆ ಈಗಾಗಲೇ ಕ್ರಮತೆಗೆದುಕೊಂಡಿದ್ದೇವೆ.

ಅಧ್ಯಕ್ಷರು.— ಈಗ ಸಭೆಯು ಮೇಲೆದ್ದು ನಾಳೆ ಬೆಳಿಗ್ಗೆ ೯ ಗಂಟೆಗೆ ಸೇರುವುದು. ಎಲ್ಲರಿಗೂ ಧನ್ಯವಾದಗಳು.

[ಸಭೆಯು ೭ ಗಂಟೆ ೧೫ ನಿಮಿಷಗಳಿಗೆ ಮುಂಕ್ತಾಯವಾಗಿ, ಪುನಃ ದಿನಾಂಕ ೨೫ನೇ ಆಗಸ್ಟ್ ಮಾಹೆ ೧೯೮೫ರ ಶುಕ್ರವಾರದಂದು ಬೆಳಿಗ್ಗೆ ೯ ಗಂಟೆಗೆ ಪುನಃ ಸೇರಲು ನಿಶ್ಚಯಿಸಲಾಯಿತು]